ಮಾಡಿರುವಂತಹ ವಸತಿ ಕಾರ್ಯಾಗಾರಗಳು. ನಾಲ್ಕು ವರ್ಷಗಳಿಂದ ಇಲ್ಲಿ ಮೂಲಭೂತ ಸೌಕರ್ಯಗಳು ಆಗಿಲ್ಲ. ಅದಕ್ಕೆ ತಾವು ಇದರ ಬಗ್ಗೆ ವಿಶೇಷವಾದ ಗಮನವನ್ನು ಹರಿಸಿ ಸಂಬಂಧಪಟ್ಟ ಇಲಾಖೆಯವರಿಗೆ ಪತ್ರ ಬರೆದು ಯಾವಾಗ ಮೂಲಭೂತ ಸೌಕರ್ಯಗಳನ್ನು ಕೊಡಿಸುತ್ತೀರಿ ಎನ್ನುವುದನ್ನು ದಯಮಾಡಿ ಸ್ಪಷ್ಟಪಡಿಸಬೇಕು ಎಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಕಾಶಪ್ಪನವರ್ : ಸ್ಥಳೀಯ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಹಾಗೂ ಅಲ್ಲಿಯ ಗ್ರಾಮ ಪಂಚಾಯಿತಿ ಮತ್ತು ಪುರಸಭೆಗಳ ಮೂಲಕ ಅಲ್ಲಿ ಅಗತ್ಯ ಸೌಲಭ್ಯಗಳನ್ನು ಕೊಡಿಸುವುದಕ್ಕೆ ಈಗಾಗಲೇ ನಾವು ಅವರಿಗೆ ವಿನಂತಿಯನ್ನು ಕೂಡ ಮಾಡಿಕೊಂಡಿದ್ದೇವೆ. ಅದರ ಪ್ರಕಾರ ಮತ್ತೊಮ್ಮೆ ತಮ್ಮ ಕೋರಿಕೆಯ ಪ್ರಕಾರ ಕ್ರಮವನ್ನು ಮಾಡಲಾಗುವುದು ಮತ್ತು ಬೆಳಗಾಂ ಜಿಲ್ಲೆಯಲ್ಲಿ ತಾವು ಎಷ್ಟು ಮನೆಗಳನ್ನು ಕಟ್ಟುತ್ತಿದ್ದೀರಿ ಎನ್ನತ್ಕಿ ವಿಷಯವನ್ನು ತಿಳಿಸುವುದಾದರೆ ಈ ವರ್ಷ ಹತ್ತು ಮನೆಗಳನ್ನು ಕಟ್ಟುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲಿನ ಜಾಯಿಂಟ್ ಡೈರೆಕ್ಟರ್ ಮೂಲಕ ಈ ಕಾರ್ಯಕ್ರಸವನ್ನು ಮಾಡುತ್ತೇವೆ. ಫಲಾನುಭವಿಗಳ ಆಯ್ಕೆಯನ್ನು ಕೂಡ ಅವರೇ ಮಾಡುತ್ತಾರೆ ಎನ್ನುವ ಮಾತನ್ನು ತಿಳಿಸುತ್ತಾ ವಿಶೇಷವೇನಾದರೂ ಇದ್ದರೆ ತಾವು ನನಗೆ ಪತ್ರವನ್ನು ಬರೆಯಿರಿ. ಅಗತ್ಯ ಕ್ರಮವನ್ನು ಕೈಗೊಳ್ಳುತ್ತೇನೆ ಎನ್ನುವ ಮಾತನ್ನು ಕೂಡ ಹೇಳಬಯಸುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ರೇವು ನಾಯಕ್ ಬೆಳಮಗಿ ಅವರ ಮುಂದಿನ ಪ್ರಶ್ನೆ ಆರ್ ಡಿಪಿಆರ್‌ಗೆ ವರ್ಗಾವಣೆ ಆಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಅದು ಬಹಳ ಇಂಪಾರ್ಟೆಂಟ್ ಕ್ವೆಶ್ಚನ್.

ಅಧ್ಯಕ್ಷರು : ಒಪ್ಪಿಕೊಂಡೆ, ಪ್ರಶ್ನೆ ಬೇರೆ ಇಲಾಖೆಗೆ ಹೋಗಿದೆ. ಅವರ್ಯಾರೂ ಉತ್ತರ ಕೊಟ್ಟಿಲ್ಲ; ಮಂದೆ ಹಾಕಿಕೊಳ್ಳೋಣ.

ಗಂಗಾ ಕಲ್ಯಾಣ ಯೋಜನೆ

101 (841) ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಜನಾಂಗದವರಿಗೆ 2000-2001ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಗೆ ನೀರಾವರಿ ಒದಗಿಸಲು ನಿಗದಿಪಡಿಸಿದ ಗುರಿಯೇನು (ಜಿಲ್ಲಾವಾರು ಹಾಗೂ ತಾಲ್ಲೂಕುವಾರು ವಿವರ ನೀಡುವುದು)

ಆ) ಈವರೆಗೆ ಸಾಧಿಸಿದ ಪ್ರಗತಿಯೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಕರ್ನಾಟಕ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಅಭಿವೃದ್ಧಿ ನಿಗಮವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಾಂಗದವರಿಗೆ 2000-2001ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ನೀರಾವರಿ ಸೌಲಭ್ಯ ಒದಗಿಸಲು ನಿಗಧಿಪಡಿಸಲಾಗಿದೆ. ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧ ಎ ಮತ್ತು ಬಿ ನಲ್ಲಿ ನೀಡಲಾಗಿದೆ.

ಆ) ಈವರೆಗೆ 370 ಯಶಸ್ವಿ ಕೊಳವೇಬಾವಿಗಳನ್ನು ಕೊರೆಯಲಾಗಿದೆ. ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳನ್ನು ಅನುಬಂಧ ಎ ಮತ್ತು ಬಿ ನಲ್ಲಿ ನೀಡಲಾಗಿದೆ.

ಅನುಬಂಧ -'ಆ'

2000 - 2001ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಸಾಮೂಹಿಕ ನೀರಾವರಿ ಕೊಳವೆಬಾವಿಗಳ ಪ್ರಗತಿ

ಕ್ರ. ಸಂ.	ಜಿಲ್ಲೆಗಳ ಹೆಸರು	ಕೊರೆದ ಕೊಳವೆ ಗುರಿ	ಬಾವಿಗಳ ಪ್ರಗತಿ ಸಾಧನೆ
1	2	3	4
01.	ಬೆಂಗಳೂರು (ನ)	09	04
02.	ಬೆಂಗಳೂರು (ಗ್ರಾ)	10	03
03.	ತುಮಕೂರು	11	-
04.	ಚಿತ್ರದುರ್ಗ	10	02
05.	ದಾವಣಗೆರೆ	10	02
06.	ಶಿವಮೊಗ್ಗ	11	05
07.	ಕೋಲಾರ	11	-
08.	ಮೈಸೂರು	10	-
09.	ಮಂಡ್ಯ	07	08
10.	ಮಡಿಕೇರಿ	10	02
11.	ಹಾಸನ	10	06
12.	ಮಂಗಳೂರು	09	-
13.	ಉಡುಪಿ	09	-
14.	ಚಾಮರಾಜನಗರ	10	-
15.	ಚಿಕ್ಕಮಗಳೂರು	10	-
16.	ಬೆಳಗಾಂ	10	10
17.	ಉತ್ತರ ಕನ್ನಡ	10	10
18.	ಧಾರವಾಡ	09	07
19.	ಗದಗ	09	03

1	2	3	4
20.	ಹಾವೇರಿ	10	04
21.	ಬಿಜಾಪುರ	10	06
22.	ಬಾಗಲಕೋಟೆ	10	-
23.	ಗುಲ್ಬರ್ಗಾ	10	05
24.	ಬೀದರ್	07	02
25.	ರಾಯಚೂರು	10	-
26.	ಬಳ್ಳಾರಿ	10	04
27.	ಕೊಪ್ಪಳ	10	06
	ಒಟ್ಟು	**262**	**89**

ವೈಯುಕ್ತಿಕ ನೀರಾವರಿ ಯೋಜನೆಯಡಿ 2000-2001ನೇ ಸಾಲಿನಲ್ಲಿ ನಿಗದಿಪಡಿಸಿದ ಗುರಿ ಮತ್ತು ಸಾಧನೆ

	ತಾಲ್ಲೂಕು	ಗುರಿ	ಸಾಧನೆ
1.	**ಬೆಂಗಳೂರು (ನ) (ತಾ॥)**		
	1. ಬೆಂಗಳೂರು (ದ)	09	-
	2. ಬೆಂಗಳೂರು (ಉ)	04	-
	3. ಆನೇಕಲ್	08	05
	ಒಟ್ಟು	**21**	**05**
2.	**ಬೆಂಗಳೂರು (ಗ್ರಾ)**		
	1. ಕನಕಪುರ	04	-
	2. ಚನ್ನಪಟ್ಟಣ	02	-
	3. ರಾಮನಗರ	02	02
	4. ಮಾಗಡಿ	03	02
	5. ನೆಲಮಂಗಲ	09	05

1	2	3	4
6.	ದೊಡ್ಡಬಳ್ಳಾಪುರ	03	-
7.	ದೇವನಹಳ್ಳಿ	09	-
8.	ಹೊಸಕೋಟೆ	03	-
	ಒಟ್ಟು	**36**	**09**
3.	**ಚಿತ್ರದುರ್ಗ**		
1.	ಚಳ್ಳಕೆರೆ	06	02
2.	ಚಿತ್ರದುರ್ಗ	06	02
3.	ಹಿರಿಯೂರು	07	06
4.	ಹೊಳಲಕೆರೆ	05	-
5.	ಹೊಸದುರ್ಗ	06	-
6.	ಮೊಳಕಾಲ್ಮೂರು	06	-
	ಒಟ್ಟು	**36**	**08**
4.	**ದಾವಣಗೆರೆ**		
1.	ಜಗಳೂರು	05	-
2.	ದಾವಣಗೆರೆ	04	-
3.	ಚನ್ನಗಿರಿ	10	09
4.	ಹರಪನಹಳ್ಳಿ	15	-
5.	ಹೊನ್ನಾಳ	04	05
6.	ಹರಿಹರ	04	-
	ಒಟ್ಟು	**42**	**14**

1	2	3	4
5.	**ಕೋಲಾರ ಜಿಲ್ಲೆ**		
	1. ಗೌರಿಬಿದನೂರು	03	-
	2. ಚಿಕ್ಕಬಳ್ಳಾಪುರ	05	-
	3. ಶಿಡ್ಲಘಟ್ಟ	03	01
	4. ಚಿಂತಾಮಣಿ	03	-
	5. ಶ್ರೀನಿವಾಸಪುರ	03	-
	6. ಮುಳಬಾಗಿಲು	03	-
	7. ಕೆ.ಜಿ.ಎಫ್	12	-
	8. ಕೋಲಾರ	04	-
	9. ಮಾಲೂರು	03	-
	10. ಬಾಗೇಪಲ್ಲಿ	03	-
	ಒಟ್ಟು	**44**	**01**
6.	**ತುಮಕೂರು**		
	1. ತುಮಕೂರು	10	-
	2. ಪಾವಗಡ	03	-
	3. ಮಧುಗಿರಿ	03	-
	4. ಕೊರಟಗೆರೆ	03	-
	5. ಗುಬ್ಬಿ	04	-
	6. ಕುಣಿಗಲ್	06	-
	7. ತುರುವೇಕೆರೆ	03	-
	8. ತಿಪಟೂರು	03	-
	9. ಸಿ.ಎನ್.ಹಳ್ಳಿ	03	-
	10. ಶಿರಾ	06	-
	ಒಟ್ಟು	**44**	**-**

1	2	3	4
7.	**ಶಿವಮೊಗ್ಗ ಜಿಲ್ಲೆ**		
	1. ಶಿವಮೊಗ್ಗ	09	06
	2. ಭದ್ರಾವತಿ	08	07
	3. ತೀರ್ಥಹಳ್ಳಿ	-	-
	4. ಹೊಸನಗರ	-	-
	5. ಸಾಗರ	05	-
	6. ಸೊರಬ	08	06
	7. ಶಿಕಾರಿಪುರ	10	03
	ಒಟ್ಟು	**40**	**22**
8.	**ಮೈಸೂರು ಜಿಲ್ಲೆ**		
	1. ಮೈಸೂರು	10	-
	2. ಹುಣಸೂರು	06	-
	3. ಟಿ. ನರಸೀಪುರ	06	-
	4. ನಂಜನಗೂಡು	03	-
	5. ಹೆಚ್. ಡಿ. ಕೋಟೆ	06	-
	6. ಪಿರಿಯಾಪಟ್ಟಣ	03	-
	ಒಟ್ಟು	**34**	**-**
9.	**ಚಾಮರಾಜನಗರ ಜಿಲ್ಲೆ**		
	1. ಚಾಮರಾಜನಗರ	21	-
	2. ಗುಂಡ್ಲುಪೇಟೆ	05	-
	3. ಕೊಳ್ಳೇಗಾಲ	06	-
	4. ಯಳಂದೂರು	00	-
	ಒಟ್ಟು	**32**	**-**

1	2	3	4
10.	**ಚಿಕ್ಕಮಗಳೂರು ಜಿಲ್ಲೆ**		
	1. ಚಿಕ್ಕಮಗಳೂರು	05	-
	2. ಶೃಂಗೇರಿ	02	-
	3. ಮೂಡಿಗೆರೆ	07	-
	4. ಬೀರೂರು	05	-
	5. ತರಿಕೆರತ	06	04
	6. ಕಡೂರು	06	05
	ಒಟ್ಟು	**31**	**09**
11.	**ದಕ್ಷಿಣ ಕನ್ನಡ ಜಿಲ್ಲೆ**		
	1. ಮಂಗಳೂರು	02	-
	2. ಸೂಳ್ಯ	08	-
	3. ಪುತ್ತೂರು	02	-
	4. ಬೆಳ್ತಂಗಡಿ	04	-
	5. ಬಂಟವಾಳ	05	-
	ಒಟ್ಟು	**21**	**-**
12.	**ಉಡುಪಿ ಜಿಲ್ಲೆ**		
	1. ಉಡುಪಿ	04	08
	2. ಬ್ರಹ್ಮವರ	07	-
	3. ಕುಂದಾಪುರ	07	-
	4. ಕಾರ್ಕಳ	04	05
	ಒಟ್ಟು	**21**	**13**

1	2	3	4
13.	**ಹಾಸನ ಜಿಲ್ಲೆ**		
1.	ಹಾಸನ	04	04
2.	ಬೇಲೂರು	06	-
3.	ಅರಸೀಕೆರೆ	08	-
4.	ಶ್ರವಣಬೆಳಗೋಳ	04	-
5.	ಹೊಳೇನರಸೀಪುರ	04	01
6.	ಅರಕಲಗೂಡು	04	03
7.	ಸಕಲೇಶಪುರ	04	-
8.	ಚನ್ನರಾಯಪಟ್ಟಣ	-	03
	ಒಟ್ಟು	**34**	**11**
14.	**ಕೊಡಗು ಜಿಲ್ಲೆ**		
1.	ವೀರಾಜಪೇಟೆ	07	-
2.	ವಂಡಕೇರಿ	03	-
3.	ಸೋಮಾರಪೇಟೆ	08	-
	ಒಟ್ಟು	**18**	**-**
15.	**ಮಂಡ್ಯ ಜಿಲ್ಲೆ**		
1.	ಮಂಡ್ಯ	03	-
2.	ನಾಗಮಂಗಲ	03	-
3.	ಮದ್ದೂರು	03	07
4.	ಮಳವಳ್ಳಿ	06	02
5.	ಶ್ರೀರಂಗಪಟ್ಟಣ	06	02
6.	ಪಾಂಡವಪುರ	03	-
7.	ಕೃಷ್ಣರಾಜಪೇಟೆ	03	-
	ಒಟ್ಟು	**27**	**11**

1	2	3	4
16.	**ಬೆಳಗಾಂ ಜಿಲ್ಲೆ**		
1.	ಬೆಳಗಾಂ	02	02
2.	ರಾಮದುರ್ಗ	04	03
3.	ಬೈಲಹೊಂಗಲ	02	11
4.	ಖಾನಪುರ	02	03
5.	ಗೋಕಾಕ್	03	02
6.	ಹುಕ್ಕೇರಿ	04	01
7.	ಚಿಕ್ಕೋಡಿ	12	03
8.	ರಾಯಬಾಗ್	04	01
9.	ಅಥಣಿ	02	10
10.	ಸೌದತ್ತಿ	-	03
	ಒಟ್ಟು	**35**	**39**
17	**ಬಿಜಾಪುರ ಜಿಲ್ಲೆ**		
1.	ಬಸವನಬಾಗೇವಾಡಿ	11	01
2.	ಬಿಜಾಪುರ	06	10
3.	ಮುದ್ದೇಬಿಹಾಳ	18	-
4.	ಇಂಡಿ	06	11
5.	ಸಿಂಧಗಿ	06	03
	ಒಟ್ಟು	**47**	**25**

1	2	3	4
18.	**ಬಾಗಲಕೋಟೆ ಜಿಲ್ಲೆ**		
1.	ಬಾಗಲಕೋಟೆ	04	-
2.	ಜಮಖಂಡಿ	04	-
3.	ಬಿಳಗಿ	05	-
4.	ಮುಧೋಳ	08	-
5.	ಬಾದಮಿ	08	-
6.	ಹುನಗುಂದ	04	-
	ಒಟ್ಟು	**33**	**-**
19.	**ಧಾರವಾಡ ಜಿಲ್ಲೆ**		
1.	ಧಾರವಾಡ	10	04
2.	ಹುಬ್ಬಳ್ಳಿ	10	07
3.	ಕಲಘಟಗಿ	05	07
4.	ಕುಂದಗೋಳ	04	01
5.	ನವಲಗುಂದ	06	-
	ಒಟ್ಟು	**35**	**19**
20.	**ಗದಗ ಜಿಲ್ಲೆ**		
1.	ಗದಗ	06	-
2.	ಶಿರಹಟ್ಟಿ	06	-
3.	ಮುಂಡರಗಿ	06	-
4.	ರೋಣ	07	-
5.	ನರಗುಂದ	07	-
	ಒಟ್ಟು	**32**	**-**

1	2	3	4
21.	**ಹಾವೇರಿ ಜಿಲ್ಲೆ**		
1.	ಹಾವೇರಿ	04	04
2.	ಶಿಗ್ಗಾಂವ	05	-
3.	ಹಾನಗಲ್	05	02
4.	ಹಿರತೇಕೆರೂರ್	05	-
5.	ರಾಣೆಬೆನ್ನೂರು	05	-
6.	ಬ್ಯಾಡಗಿ	07	02
	ಒಟ್ಟು	**31**	**08**
22.	**ಉತ್ತರ ಕನ್ನಡ ಜಿಲ್ಲೆ**		
1.	ಕಾರವಾರ	04	-
2.	ಶಿರಸಿ	04	-
3.	ಬಟ್ಕಲ್	04	-
4.	ಕುಮಟ	04	-
5.	ಅಂಕೋಲ	05	-
6.	ಹಳಿಯಾಳ	05	07
7.	ಮಂಡಗೋಡ್	-	13
	ಒಟ್ಟು	**26**	**20**
23.	**ಬೀದರ್ ಜಿಲ್ಲೆ**		
1.	ಬೀದರ್	04	-
2.	ಬಾಲ್ಕಿ	09	-
3.	ಹುಮನಾಬಾದ್	04	-
4.	ಔರದ್	04	-
5.	ಬಸವಕಲ್ಯಾಣ	04	-
	ಒಟ್ಟು	**25**	**-**

1	2	3	4
24.	**ಗುಲ್ಬರ್ಗಾ ಜಿಲ್ಲೆ**		
1.	ಗುಲ್ಬರ್ಗಾ	05	03
2.	ಚಿಂಚೋಳಿ	09	-
3.	ಅಳಂದ	12	05
4.	ಅಫ್‌ಜಲ್‌ಪುರ	08	08
5.	ಚಿತ್ತಾಪುರ	01	-
6.	ಸೇಡಂ	02	-
7.	ಜೇವರ್ಗಿ	07	-
8.	ಯಾದಗಿರಿ	02	-
9.	ಶಹಪುರ	02	-
10.	ಸುರಪುರಂ	02	-
	ಒಟ್ಟು	**50**	**16**
25.	**ಬಳ್ಳಾರಿ ಜಿಲ್ಲೆ**		
1.	ಬಳ್ಳಾರಿ	04	02
2.	ಶಿರಗುಪ್ಪ	09	-
3.	ಹೊಸಪೇಟೆ	04	-
4.	ಸಂಡೂರು	04	-
5.	ಕೂಡ್ಲಗಿ	08	08
6.	ಹಡಗಲಿ	04	04
7.	ಹಗರಿಬೊಮ್ಮನಹಳ್ಳಿ	-	04
	ಒಟ್ಟು	**33**	**18**

1	2	3	4
26.	ರಾಯಚೂರು ಜಿಲ್ಲೆ		
1.	ರಾಯಚೂರು	06	07
2.	ದೇವದುರ್ಗ	12	-
3.	ಲಿಂಗಸಗೂರು	04	-
4.	ಮಾನ್ವಿ	04	-
5.	ಸಿಂಧನೂರು	03	-
	ಒಟ್ಟು	29	07
27.	ಕೊಪ್ಪಳ ಜಿಲ್ಲೆ		
1.	ಕೊಪ್ಪಳ	09	03
2.	ಕುಷ್ಟಗಿ	07	15
3.	ಯಲಬುರ್ಗ	07	02
4.	ಗಂಗಾವತಿ	07	06
	ಒಟ್ಟು	30	26
		895	281

ಶ್ರೀ ಬಿ.ಎಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ ಜನಾಂಗದವರಿಗೆ ಇಡೀ ರಾಜ್ಯದಲ್ಲಿ ಈ ಗಂಗಾ ಕಲ್ಯಾಣ ಯೋಜನೆಯಲ್ಲಿ ಮಾನ್ಯ ಮಂತ್ರಿಗಳು ಹಾಕಿಕೊಂಡಿರುವ ಕಾರ್ಯಕ್ರಮ ಈ ವರ್ಷಕ್ಕೆ ಕೇವಲ 1157 ಕೊಳವೆ ಬಾವಿಗಳನ್ನು ಕೊರೆಯಲಿಕ್ಕೆ ಇರುವುದು. ಬಹುತೇಕ ಮಾನ್ಯ ಸಚಿವರಿಗೆ ಇದು ತೃಪ್ತಿಕರವಾಗಿ ಆಗಿರಲಿಕ್ಕಿಲ್ಲ. ದಯವಿಟ್ಟು ಇದನ್ನು ಹೆಚ್ಚಿಗೆ ಮಾಡಬೇಕು; ಮತ್ತೆ ಗುರಿಯನ್ನು ನೀವು ಸಾಧಿಸುವುದನ್ನು ನೋಡಿದರೆ ತೃಪ್ತಿ ಆಗಿಲ್ಲ. ಗುರಿ ಸಾಧನೆ ತೃಪ್ತಿಕರವಾಗಿ ಆಗಿಲ್ಲ. ಆದಷ್ಟು ಬೇಗ ಸಂಪೂರ್ಣವಾದಂತಹ ಗುರಿಯನ್ನು ಮಾರ್ಚ್ ಒಳಗೆ ಸಾಧಿಸಬೇಕು. ಮತ್ತು ಕನಿಷ್ಟ ವಿಧಾನಸಭೆಯ ಮತಕ್ಷೇತ್ರಕ್ಕೆ 50 ಆದರೂ ಪರಿಶಿಷ್ಟ ಜಾತಿ/ ಜನಾಂಗದವರಿಗೆ ವೈಯುಕ್ತಿಕ ಕೊಳವೆ ಬಾವಿಗಳನ್ನು ಕೊಟ್ಟು ಅವರ ಆರ್ಥಿಕ ಅಭಿವೃದ್ಧಿಗೆ ಅವಕಾಶವಾಗಬೇಕು. ತಾವು ಹಾಕಿಕೊಂಡಂತಹ ಉತ್ತಮ ಕಾರ್ಯಕ್ರಮ, ಒಳ್ಳೆಯ ಸಾಧನೆ ಆಗಬೇಕು ಎಂದು ತಮ್ಮ ಮೂಲಕ ಕೇಳಬಯಸುತ್ತಿದ್ದೇವೆ.

ಅಧ್ಯಕ್ಷರು : ಎಲ್ಲರೂ ಒಂದೇ ಸಲ ಕೇಳಲಿ ಏಕೆಂದರೆ ಒಬ್ಬೊಬ್ಬರೇ ಎದ್ದು ಪ್ರಶ್ನೆ ಕೇಳಿದರೆ ಟೈಮ್ ಜಾಸ್ತಿ ತೆಗೆದುಕೊಳ್ಳುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ನಿಜ. ನಾವು ಈಗ ಕೊಟ್ಟಿರತಕ್ಕದ್ದು ಬಹಳ ಕಡಿಮೆ ಇದೆ. ಯಾರಿಗೂ ಸಮಾಧಾನ ತರಕ್ಕಂಥಾ ರೀತಿಯಲ್ಲಿ ಇಲ್ಲ. ಆದರೆ ಆಯವ್ಯಯದಲ್ಲಿ ನನಗೆ ಕೊಟ್ಟಿರತಕ್ಕಂಥಾ ಹಣಕಾಸಿನ ಇತಿಮಿತಿಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸಮಾನವಾಗಿ ನಾನು ಹಂಚಿದ್ದೇನೆ. ಹಿಂದಿನ ಸಾರಿ ಕೆಲವು ಕಡೆ ಹೋಗುವುದು, ಕೆಲವು ಕಡೆ ಹೋಗದೇ ಇರುವುದು ತಪ್ಪಬೇಕು ಎನ್ನುವ ಕಾರಣಕ್ಕಾಗಿ ಪ್ರತಿ ಶಾಸಕರಿಗೂ, ತಾಲ್ಲೂಕಿಗೆ ಸಮಾನವಾಗಿ ಹಂಚಿದ್ದೇನೆ.

ಶ್ರೀ ಸಿ. ಬೈರೇಗೌಡ : ಸಮಾನವಾಗಿ ಎಲ್ಲರಿಗೂ XXX ಹಾಕಿದ್ದಾರೆ

ಶ್ರೀ ಕಾಗೋಡು ತಿಮ್ಮಪ್ಪ : ನೀವು ಹಾಕಿರುವ ನಾಮ ನಮಗೆ ಹಾಕುವುದಕ್ಕೆ ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ : ನಾವು 100, 150 ಕೊಳವೆ ಬಾವಿ ಮಾಡಿಸಿದ್ದೇವೆ. ಇವರು XXX ಸಮಾನವಾಗಿ ಎಲ್ಲರಿಗೂ ಹಾಕಿದ್ದಾರೆ.

ಅಧ್ಯಕ್ಷರು : ಮೂರು ನಾಸ ಹಾಕಿದರೆ ಎನ್ನುವ ಪದವನ್ನು ತೆಗೆದು ಬಿಡಿ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೇ, ಕಡತದಿಂದ XXX ತೆಗೆಯಬೇಕೋ ಅಥವಾ ಅವರು ಹಾಕಿದಂತಹ ನಾಮವನ್ನು ತೆಗೆಯಬೇಕೋ?

ಅಧ್ಯಕ್ಷರು : ಬೇರೆ ಒಳ್ಳೆಯ ಪದಗಳನ್ನೇ ಉಪಯೋಗಿಸಿ. ಏಕೆ ಅವೆಲ್ಲ ಉಪಯೋಗಿಸುತ್ತೀರಿ? ಒಳ್ಳೆಯ ಪದಗಳು ಇವೆಯಲ್ಲಾ ಉಪಯೋಗಿಸಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : XXX ತೆಗೆಯಬೇಕು ಎಂದು ಹೇಳಿದಿರಲ್ಲ. XXX ದಿಂದ ತೆಗೆಯಬೇಕೋ ಅಥವಾ ಅವರು ಹಾಕಿದಂತಹ XXX ತೆಗೆಯಬೇಕೋ?

(ನಗು)

ಅಧ್ಯಕ್ಷರು : ಕಡತದಿಂದ ತೆಗೆಯಬೇಕು

ಶ್ರೀ ಎಸ್. ಸುರೇಶ್‌ಕುಮಾರ್ : ಅವರು ಹಾಕಿದ್ದು ಹಾಗೆಯೇ ಉಳಿಯಬೇಕು.

(ನಗು)

ಅಧ್ಯಕ್ಷರು : ಸಮಯ ಹಾಗೆಯೇ ಮುಂದುವರಿಯುತ್ತಿದೆ.

ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆ ಇದೆ.

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ.

ಶ್ರೀ ಕರಡಿ ಸಂಗಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಲ್ಲಿ ನನ್ನ ಒಂದು ವಿನಂತಿ ಇದೆ. ಈ ಯೋಜನೆಗಳನ್ನು ರಾಜ್ಯದಲ್ಲಿ ಇಂಟ್ರಡ್ಯೂಸ್ ಮಾಡಿದ್ದಾರೆ. ಭಾರೀ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಕೊಳವೆ ಬಾವಿಗಳ ಮೂಲಕ ನೀರಾವರಿ ಸೌಲಭ್ಯವನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಆದರೆ ನೀವು ಮಾಡಿರತಕ್ಕಂಥ ಕೆಲಸ ಏನೆಂದರೆ ಒಂದು ತಾಲ್ಲೂಕಿಗೆ ಬರೇ ಮೂರು ಬೋರ್‌ವೆಲ್‌ಗಳನ್ನು ಮಾತ್ರ ಹಾಕಿರುವುದು. ಹಾಗಾದರೆ ಈ ಯೋಜನೆಯನ್ನು ಏಕೆ ಇಂಟ್ರಡ್ಯೂಸ್ ಮಾಡುತ್ತೀರಿ? ಸರ್ಕಾರ ಬಡವರ ಪರವಾಗಿ ಇದೆಯೋ ಹೇಗೆ ಎನ್ನುವುದನ್ನು ತಾವು ಹೇಳಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ತಿಮ್ಮಪ್ಪನವರೇ ಮೂರು ಕೊಳವೆ ಬಾವಿ ಸಾಲುವುದಿಲ್ಲ. ವಿಶೇಷವಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಪಾಪ್ಯುಲೇಷನ್ ಎಲ್ಲಿ ಜಾಸ್ತಿ ಇದೆಯೋ ಅಲ್ಲಿ ಜಾಸ್ತಿ ಕೊಡಬೇಕು. ಈಗ ನಮ್ಮ ತಾಲ್ಲೂಕಿನಲ್ಲಿ 35 ಪರ್ಸ್‌ಂಟ್ ಇದೆ. ಮೂರು ಕೊಳವೆ ಬಾವಿ ಕೊಟ್ಟರೆ ಯಾವ ಮೂಲೆಗೆ?

ಶ್ರೀ ಸಿ. ಬೈರೇಗೌಡ : ನಾವು ಹೇಳಿದರೆ ಅದನ್ನು ಕಡತದಿಂದ ತೆಗೆಯಿರಿ ಎಂದು ಹೇಳುತ್ತೀರಿ. ನೀವು ಈಗ ಹೇಳಿದಿರಲ್ಲ.

ಅಧ್ಯಕ್ಷರು : ನಾನು ನಾಮ ಎಂದು ಹೇಳಲಿಲ್ಲ. ಮೂರು ಕೊಟ್ಟರೆ ಸಾಲದು ಎಂದು ಹೇಳುತ್ತಿರುವುದು.

ಶ್ರೀ ಚಂದ್ರಣ್ಣ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆ ಇದೆ. ಈ ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ....

(ಗೊಂದಲ)

ಅಧ್ಯಕ್ಷರು : ಯಾರಾದರೂ ಒಬ್ಬರು ನಿಂತುಕೊಂಡು ಮಾತನಾಡಿ.

(ಗೊಂದಲ)

ಶ್ರೀ ಚಂದ್ರಣ್ಣ : 262 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಅದು ಗುರಿ 362 ಇದೆ. ತಾವು ಮಾಡಿರತಕ್ಕದ್ದು ಕೇವಲ 89. ಇಂತಹ ಸ್ಕೀಮ್ ಏಕೆ ಬೇಕು? ಈ ಇಲಾಖೆ ಏಕೆ ಬೇಕು? ತಾವು, ಸೀನಿಯರ್ ಮಂತ್ರಿಗಳು ಇದ್ದೀರಿ, ಬಹಳ ಅನುಭವ ಹೊಂದಿದ್ದೀರಿ, ದಯಮಾಡಿ ಈ ಇಲಾಖೆಯನ್ನು ತೆಗೆದು ಬಿಡಿ. ಪರಿಶಿಷ್ಟ ಜಾತಿ ಮತ್ತು ವರ್ಗದ ಈ ಇಲಾಖೆಯನ್ನು ದಯಮಾಡಿ ತೆಗೆದು ಬಿಡಿ. ಸುಮ್ಮನೆ ಕಣ್ಣೊರೆಸುವುದಕ್ಕೆ ಈ ಇಲಾಖೆ ಕೆಲಸ ಮಾಡುತ್ತಿದೆ.

(ಗೊಂದಲ)

ಶ್ರೀ ಚಂದ್ರಣ್ಣ : ಕೇವಲ 89 ಕೊಳವೆ ಬಾವಿಗಳ ಸಾಧನೆ ಆಗಿದೆ.

(ಗೊಂದಲ)

ಶ್ರೀ ಚಂದ್ರಣ್ಣ : ಪರಿಶಿಷ್ಟ ಜಾತಿ ವರ್ಗದ ಕಾರ್ಪೊರೇಷನ್ ತೆಗೆದು ಬಿಡಿ. ತಾವು ಬಹಳ ಅನುಭವಸ್ಥ ಮಂತ್ರಿಗಳು, ಸೀನಿಯರ್ ಮಂತ್ರಿ ಇದ್ದೀರಿ. ದಯಮಾಡಿ ಈ ಇಲಾಖೆಯನ್ನು ತೆಗೆಯಿರಿ.

ಅಧ್ಯಕ್ಷರು : ತಾವು ಪ್ರಶ್ನೆ ಕೇಳಿದ್ದೀರಿ. ಅವರು ಉತ್ತರ ಹೇಳುವವರೆಗೆ ಇರಿ.

ಶ್ರೀ ಚಂದ್ರಣ್ಣ : ತಾವು ಈ ಇಲಾಖೆಯನ್ನು ತೆಗೆಯಿರಿ. ಇಲ್ಲ ಎಂದರೆ 1.5 ಕೋಟಿ ಜನಸಂಖ್ಯೆ ಇರತಕ್ಕಂಥ ಜನಾಂಗಕ್ಕೆ ನ್ಯಾಯವನ್ನು ಕೊಡಿ. ಇಲ್ಲ ಪರಿಶಿಷ್ಟ ಜಾತಿ ವರ್ಗದ ಇಲಾಖೆಯನ್ನು ತೆಗೆದು ಬಿಡಿ.

ಶ್ರೀ ಪುಟ್ಟರಂಗನಾಥ್ : ಜಿಲ್ಲೆಗಳಲ್ಲಿ ಕೆಲ ತಾಲ್ಲೂಕಿನಲ್ಲಿ ಮಾತ್ರ ಈ ಯೋಜನೆ ಪ್ರಾರಂಭ ಮಾಡಿದ್ದೀರಿ. ಕೆಲವು ತಾಲ್ಲೂಕಿನಲ್ಲಿ ಪ್ರಾರಂಭ ಮಾಡಿಲ್ಲ. ಒಟ್ಟು ಇಲ್ಲಿ ನೀವು ಕೊಟ್ಟಿರತಕ್ಕಂಥ ಬಾವಿಗಳ ಸಂಖ್ಯೆಯನ್ನು ನೋಡಿದರೆ ಜಾಸ್ತಿ ಕೊಟ್ಟಿದ್ದೀರಿ. ಆದರೆ ಕೊಟ್ಟು ಕಿತ್ತುಕೊಳ್ಳುವ ವ್ಯವಸ್ಥೆಯೋ ಅಥವಾ ಇದನ್ನು ಕಾರ್ಯಗತ ಮಾಡುವುದಕ್ಕೆ ತಮಗತ ಶಕ್ತಿ ಇಲ್ಲವೋ ಎನ್ನತಕ್ಕದ್ದನ್ನು ತಾವು ಹೇಳುತ್ತೀರಾ? ಏಕೆಂದರೆ ನೀವು ಬಾವಿಯನ್ನು ಕೊಟ್ಟಿದ್ದೀರಿ. ಆದರೆ ಇದನ್ನು ಏಕೆ ಇಂಪ್ಲಿಮೆಂಟ್ ಮಾಡಲಿಲ್ಲ ಎಂಬುದನ್ನು ತಾವು ದಯಮಾಡಿ ತಿಳಿಸಬೇಕು.

ಶ್ರೀ ಅಂಜನಾ ಮೂರ್ತಿ : ಮಾನ್ಯ ಅಧ್ಯಕ್ಷರೆ, ಈ ಒಂದು ಗಂಗಾ ಕಲ್ಯಾಣ ಯೋಜನೆ ಎಲ್ಲರಿಗೂ ಗೊತ್ತಿರುವ ಪ್ರಕಾರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಒಂದು ಏಳಿಗೆಗೆ, ಒಂದು ಆರ್ಥಿಕ ಅಭಿವೃದ್ಧಿಗೆ ರೂಪಿಸಿರತಕ್ಕಂಥ ಒಂದು ಯೋಜನೆ. ಆದರೆ ಸರ್ಕಾರ ಇಲ್ಲಿ ಮಾಹಿತಿ ಕೊಟ್ಟಿರುವ ಪ್ರಕಾರ ಪ್ರಗತಿ ಮತ್ತು ಸಾಧನೆ ಬಗ್ಗೆ ಹೇಳುವುದಾದರೆ 27 ಜಿಲ್ಲೆಗಳಿಂದ 262 ಅವರ ಗುರಿ ಇಟ್ಟು ಕೊಂಡಿರುವುದು. ಸಾಧನೆ ನೋಡಿದರತ ಬರೀ 89. ಇದು ಅರ್ಥ ಆಗುತ್ತದೆ. ಈ ಒಂದು ಯೋಜನೆ ಅಡಿಯಲ್ಲಿ ಸಂಬಂಧಪಟ್ಟಂತಹ ಇಲಾಖೆಯ ಯಾವ ರೀತಿ ಕೆಲಸ ಮಾಡುತ್ತದೆ? ಎಷ್ಟು ಕಾಳಜಿವಹಿಸುತ್ತದೆ? ಹರಿಜನ ಅಥವಾ ಪರಿಶಿಷ್ಟ ಜಾತಿ/ಪಂಗಡದವರ ಪರ ಎಷ್ಟು ಕಾಳಜಿ ವಹಿಸುತ್ತದೆ ಎನ್ನುವುದು ಗೊತ್ತಾಗುತ್ತದೆ.

12. 10 ಪಿ.ಎಂ.

ನಾನು ಸರ್ಕಾರದಲ್ಲಿ ಒಂದು ವಿಚಾರ ಕೇಳುವುದೇನೆಂದರೆ, ಇಲಾಖಾ ವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿ ಸುಮಾರು 5 ರಿಂದ 15 ಎಕರೆಗಳವರೆಗೆ ಜಮೀನನ್ನು ನೀರಾವರಿಗೆ ಒಳಪಡಿಸಿದ್ದು, ಎರಡು ಪಾಯಿಂಟ್‌ಗಳನ್ನು ಮಾಡಿರುತ್ತಾರೆ. ಕೊಳವೆಬಾವಿ ಕೊರೆಯುವವರು ಎರಡು ಪಾಯಿಂಟ್‌ಗಳಲ್ಲಿ ಒಂದನ್ನು ಕೊರೆದು ವಾಪಸ್ಸು ಬರುತ್ತಾರೆ. ಕೊರೆದಿರುವ ಒಂದು ಪಾಯಿಂಟ್‌ನಲ್ಲಿ 15 ಎಕರೆಗಳಿಗೆ ಅಗತ್ಯವಾದಷ್ಟು ನೀರು ದೊರಕುವುದಿಲ್ಲ. ಆದರೂ ನೀರು ಒದಗಿಸಿಕೊಟ್ಟಿದ್ದೇವೆಂದು ಮಾಹಿತಿ ನೀಡುತ್ತಾರೆ. ತಮಗೆ ಗೊತ್ತಿರುವಂತೆ ಎಷ್ಟು ಅಡಿ ಆಳದವರೆಗತ ಕೊರೆದರೆ ನೀರು ಲಭ್ಯವಾಗುತ್ತದೆಂದು ತಿಳಿದಿದೆ. ಇವೊತ್ತಿನ ಪರಿಸ್ಥಿತಿಯಲ್ಲಿ ನಮ್ಮ ಭಾಗದಲ್ಲಿ ಸುಮಾರು 400-500 ಅಡಿಗಳವರೆಗೆ ಕೊರೆದರೂ ನೀರು ಸಿಗುವುದಿಲ್ಲ. ಪರಿಸ್ಥಿತಿ ಹೀಗಿದ್ದರೂ 350 ಅಡಿಗಳ ನಂತಹ ಕೊರೆಯಬಾರದೆಂದು ಇಲಾಖಾ ವತಿಯಿಂದ ಸುತ್ತೋಲೆ

ಹೊರಡಿಸಿದ್ದಾರೆ, ಎರಡು ಪಾಯಿಂಟ್‌ಗಳನ್ನು ಮಾಡಿರುವ ಕಡೆ ಪೂರ್ಣವಾಗಿ ಎರಡೂ ಪಾಯಿಂಟ್‌ಗಳನ್ನೂ ಕೊರೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಎರಡನೆಯದಾಗಿ, 350 ಅಡಿಗಳವರೆಗೆ ಮಾತ್ರ ಕೊರೆಯಬೇಕೆಂದು ಇರುವ ಸುತ್ತೋಲೆಯನ್ನು ತೆಗೆದುಹಾಕಿ ನೀರು ಲಭ್ಯವಾಗುವವರೆಗೆ ಕೊರೆಯುವುದಕ್ಕೆ ಅವಕಾಶ ಮಾಡಿಕೊಡಲು ಸರ್ಕಾರ ಅನುಮತಿ ನೀಡಬೇಕೆಂದು ಕೋರುತ್ತೇನೆ.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ಗಂಗಾ ಕಲ್ಯಾಣ ಯೋಜನೆ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಏಳಿಗೆಗಾಗಿ ಇರುವ ಕಾರ್ಯಕ್ರಸವಾಗಿದ್ದು, ಪ್ರಸಕ್ತ ವರ್ಷದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಕೊಟ್ಟಿರುವ ಗುರಿಗಳ ಸಂಖ್ಯೆ ಬಹಳ ಕಡಿಮೆಯಿದ್ದು, ಹಿಂದುಳಿದಿರುವ ಚಾಮರಾಜನಗರ ಜಿಲ್ಲೆಗೆ 10 ವೈಯುಕ್ತಿಕ ಕೊಳವೆ ಬಾವಿಗಳನ್ನು ಹಾಗೂ 37 ಸಾಮೂಹಿಕ ನೀರಾವರಿ ಯೋಜನೆಯನ್ನು ಮಂಜೂರು ಮಾಡಲಾಗಿರುತ್ತದೆ. ಮಾರ್ಚ್ ತಿಂಗಳ ಅಂತ್ಯಕ್ಕೆ ಬರುತ್ತಿದ್ದರೂ ಒಂದೂ ಯೋಜನೆಯನ್ನು ಮುಗಿಸುವುದಿಲ್ಲ. ಅಂದರೆ ಇದಕ್ಕೆ ಒದಗೀರುವ ಹಣ ಲ್ಯಾಪ್ಸ್ ಆಗುವುದಿಲ್ಲವೇ? ಹಿಂದುಳಿದ ಜಿಲ್ಲೆಯಾಗಿರುವ ಚಾಮರಾಜನಗರ ಜಿಲ್ಲೆ ಬಗ್ಗೆ ಸರ್ಕಾರಕ್ಕೆ ಏಕಷ್ಟು ತಾತ್ಸಾರ ಮನೋಭಾವ? ಏಕೆ ಈ ತರಹ ಅನ್ಯಾಯ ಮಾಡುತ್ತಿದ್ದೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಆಡಳಿತ ಹಾಗೂ ವಿರೋಧ ಪಕ್ಷದಲ್ಲಿರುವ ಎಲ್ಲಾ ಮಾನ್ಯ ಸದಸ್ಯರಲ್ಲಿ ಈ ವಿಚಾರದಲ್ಲಿರುವ ಕಾಳಜಿ ಏನೆಂದರೆ, ರಾಜ್ಯದ ತಾಲ್ಲೂಕುವಾರು ಹಾಗೂ ಜಿಲ್ಲಾವಾರು ಕೊಟ್ಟಿರುವ ಫಲಾನುಭವಿಗಳ ಸಂಖ್ಯೆ ಬಹಳ ಕಡಿಮೆಯಿದೆ ಎಂಬುದಾಗಿದೆ. ಈ ವಿಚಾರದಲ್ಲಿ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಬಯಸುವುದೇನೆಂದರೆ, ಸದರಿ ಯೋಜನೆಯಡಿ ಎಸ್.ಸಿ.ಪಿ.ಯಲ್ಲಿ ಕೇಂದ್ರ ಸರ್ಕಾರ ಸ್ಪೆಷಲ್ ಗ್ರಾಂಟ್ ಅನ್ನು ಕೊಡುವುದಕ್ಕೆ ತಯಾರಿದೆ. ರಾಜ್ಯ ಸರ್ಕಾರ ಕೇಳಿದಷ್ಟು ಹಣವನ್ನು ಕೇಂದ್ರ ಸರ್ಕಾರ ಕೊಡುತ್ತದೆ. ಆದಕಾರಣ, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣ ನಿಗಮದ ಆಡಳಿತ ವರ್ಗದವರು, ಅದರಲ್ಲೂ ಸಮಾಜ ಕಲ್ಯಾಣ ಸಚಿವರಾಗಿರುವ ಕಾಗೋಡು ತಿಮ್ಮಪ್ಪನವರು ಹಿಂದುಳಿದ ವರ್ಗದವರ ವಿಚಾರದಲ್ಲಿ ರಾಜಕೀಯವಾಗಿ ಮೇಲೆ ಬಂದಿರುವ ತಾವು ಪರಿಶಿಷ್ಟ ಜಾತಿ ಮತ್ತು ವರ್ಗದ ಜನರಿಗೆ ಈ ರೀತಿಯಾಗಿ ಅನ್ಯಾಯ ಮಾಡುವುದಕ್ಕೆ ಅವಕಾಶವೀಯದೆ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಪ್ರಸ್ತಾವನೆಗಳನ್ನು ಕಳುಹಿಸಿಕೊಡುವುದಕ್ಕೆ ತಮಗಿರುವ ಅಡಚಣೆಯಾದರೂ ಏನು?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಜಾರಿಯಾಗುವ ಅತ್ಯಂತ ಅಪರೂಪವಾದ ಹಾಗೂ ಶೀಘ್ರಗತಿಯಲ್ಲಿ ಫಲ ಕೊಡುವಂಥ ಕಾರ್ಯಕ್ರಮ ಇದಾಗಿದ್ದು, ಇದರ ಬಗ್ಗೆ ಭಿನ್ನಭಿಪ್ರಾಯವಿಲ್ಲ. ಈ ಇಲಾಖೆಗೆ ನನ್ನಿಂದ ಅನ್ಯಾಯವಾಗಿದೆಯೆಂದು ಯಾರಾದರೂ ಭಾವಿಸಿಕೊಂಡಿದ್ದರೆ ದಯವಿಟ್ಟು ಆ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳಬೇಕು. ಪ್ರಸಕ್ತ ವರ್ಷ ಯೋಜನೆಯಡಿ ಗುರಿಯನ್ನು ಕಡಿಮೆ ಕೊಟ್ಟಿರುವುದಕ್ಕೆ ಕಾರಣವೇನೆಂದರೆ, ಹಿಂದೆ ಕೈಗೆತ್ತಿಕೊಡಬೇಕಾಗಿತ್ತು. ಆದಕಾರಣ, ವಿದ್ಯುದ್ದೀಕರಣ ಸೌಲಭ್ಯ ಒದಗಿಸಿಕೊಡುವ ಕಾರ್ಯ ಬಾಕಿ ಇದ್ದುದರಿಂದ ಪೂರ್ಣಗೊಳಿಸುವುದಕ್ಕೋಸ್ಕರ ಪ್ರಸಕ್ತ ವರ್ಷ ಇದಕ್ಕಾಗಿ ನಾವು 32 ಕೋಟಿ ರೂಪಾಯಿಗಳನ್ನು

ಖರ್ಚು ಮಾಡಿದ್ದೇವೆ. ಈ ಕೆಲಸವನ್ನು ಪೂರ್ಣಗೊಳಿಸುವುದಕ್ಕಾಗಿ ಹೊಸ ಕೆಲಸಕ್ಕೆ ಕಡಿಮೆ ಹಣವನ್ನು ಒದಗಿಸಲಾಗಿದೆ. ಆಯವ್ಯಯದಲ್ಲಿ ಪ್ರಸಕ್ತ ವರ್ಷಕ್ಕೆ ಕಡಿಮೆ ಹಣ ಕೊಟ್ಟಿದ್ದಾರೆ. ಪೂಲ್‌ನಿಂದ ಬಂದಿರುವ ಹಣವನ್ನೆಲ್ಲಾ ತೆಗೆದುಕೊಂಡು ಹಿಂದೆ ಪ್ರಾರಂಭಿಸಿರುವ ಯೋಜನೆಗಳನ್ನು ಮಾರ್ಚ್ ತಿಂಗಳ ಅಂತ್ಯದೊಳಗಾಗಿ ಪೂರ್ಣಗೊಳಿಸುವ ದಿಸೆಯಲ್ಲಿ ಆ ಕೆಲಸ ಮಾಡುತ್ತಿದ್ದೇವೆ. ಆದುದರಿಂದ, ಉಳಿದಿರುವ ಹಳೆಯ ಕೆಲಸಗಳನ್ನೆಲ್ಲಾ ಮುಗಿಸಿದ ಬಳಿಕ ಮುಂದಿನ ವರ್ಷದಿಂದ ಹೆಚ್ಚು ಹಣ ಸಿಗುತ್ತದೆ. ಆಗ ಎಲ್ಲಾ ಜಿಲ್ಲೆಗಳಿಗೂ ಹೆಚ್ಚು ಹಣ ಕೊಡಬೇಕೆಂಬ ಅಪೇಕ್ಷೆ ನನ್ನದಾಗಿದೆ. ಈ ವಿಚಾರದಲ್ಲಿ ಸಂತೋಷಪಡಿಸುವರಲ್ಲಿ ನಾನೂ ಒಬ್ಬನಾಗಿದ್ದೇನೆ. ಮಾನ್ಯ ಅಧ್ಯಕ್ಷರು ತಿಳಿಸಿದಂತೆ ಹಿಡುವಳಿ ಮತ್ತು ಪ್ರಜಾಸಂಖ್ಯೆಗನುಗುಣವಾಗಿ ಮಾಡುವುದರಲ್ಲಿ ಸತ್ಯಾಂಶವಿದೆ. ಈಗ ಪ್ರತಿಯೊಂದು ತಾಲ್ಲೂಕಿನಲ್ಲೂ ಶಾಸಕರ ಅಧ್ಯಕ್ಷತೆಯಲ್ಲಿ ಒಂದೊಂದು ಆಯ್ಕೆ ಸಮಿತಿ ಮಾಡಿದ್ದು ಮುಂದಿನ ವರ್ಷದಿಂದ ಕೊಡುವಾಗ ಇದನ್ನು ಗಮನದಲ್ಲಿಟ್ಟುಕೊಂಡು ಮಾಡುತ್ತೇನೆ. ಇದು ನೂರಕ್ಕೆ ನೂರರಷ್ಟು ಸಬ್ಸಿಡಿ ಯೋಜನೆಯಾಗಿದ್ದು ಇದರಲ್ಲಿ ಕೇಂದ್ರ ಸರ್ಕಾರದ ಶೇಕಡ 50 ರಷ್ಟು ಸಾಲ ಇದ್ದು, ಇದರಲ್ಲಿ 35 ಕೋಟಿ ಕೊಡುವುದಾಗಿ ತಿಳಿಸಿರುತ್ತಾರೆ. ಈ ವರ್ಷದ ಬಜೆಟ್‌ನಲ್ಲಿ ಶೇರ್ ಕ್ಯಾಪಿಟಲ್ ಇಲ್ಲದಿರುವುದರಿಂದ ಮುಂದಿನ ವರ್ಷ ಹೆಚ್ಚು ಷೇರ್ ಕ್ಯಾಪಿಟಲ್ ಮಾಡಿಕೊಂಡು 50 ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ನಾನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ. ಕೇಂದ್ರದಿಂದ ಎಷ್ಟು ಗರಿಷ್ಟ ಮಟ್ಟದಲ್ಲಿ ಹಣ ಪಡೆದುಕೊಳ್ಳಬೇಕೋ ಅಷ್ಟನ್ನೂ ತೆಗೆದುಕೊಳ್ಳುತ್ತೇನೆ. ಪರಿಶಿಷ್ಟಜಾತಿ ವರ್ಗಕ್ಕೆ ಸೇರಿದ ಯಾರೇ ಆದರೂ ಸಾಲವಾದರೂ ಚಿಂತೆಯಿಲ್ಲ, ತೆಗೆದುಕೊಳ್ಳುತ್ತೇವೆಂದು ಮುಂದೆ ಬಂದರೆ ನಾವು ಆ ಭಾಗವನ್ನು ಇಟ್ಟುಕೊಳ್ಳುತ್ತೇವೆ. ಇದನ್ನು ಶಾಸಕರ ಆಯ್ಕೆ ಸಮಿತಿ ಮುಂದಿಟ್ಟು ಸಾಲದ ಭಾಗವನ್ನು ಕೊಡುವುದಕ್ಕೆ ತಯಾರಿದ್ದರೆ ಖಂಡಿತವಾಗಿಯೂ ಈ ಸೌಲಭ್ಯವನ್ನು ಒದಗಿಸಿಕೊಡುತ್ತೇನೆ.

ಶ್ರೀ ಬಿ. ಸೋಮಶೇಖರ್ : ಈ ಯೋಜನೆ ಶೇಕಡಾ ನೂರರಷ್ಟು ಸಬ್ಸಿಡಿಯುಳ್ಳದ್ದು ಎಂದು ಹೇಳಿಕೊಂಡು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದು ಸಬ್ಸಿಡಿ ಯೋಜನೆಯೆಂದು ಮಾನಸಿಕವಾಗಿ ಎಲ್ಲಾ ರೈತರು ತೀರ್ಮಾನ ಮಾಡಿಕೊಂಡಿರುವಾಗ, ಯೋಜನೆಯಡಿ ನೀವು ಅರ್ಧ ಭಾಗ ಸಾಲ ತೆಗೆದುಕೊಳ್ಳಿ ಉಳಿದ ಅರ್ಧ ಭಾಗ ನಾವು ಉಚಿತವಾಗಿ ಕೊಡುತ್ತೇವೆ ಎಂದರೆ ಯಾವ ರೈತ ಕೂಡ ಸೌಲಭ್ಯ ಪಡೆಯಲು ಮುಂದೆ ಬರುವುದಿಲ್ಲ. ಆದುದರಿಂದ, ಈ ನಿಟ್ಟಿನಲ್ಲಿ ನಮ್ಮ ಸಲಹೆ ಏನೆಂದರೆ, ಕೇಂದ್ರ ಸರ್ಕಾರದವರು ಶೇಕಡ 50ರಷ್ಟು ಸಾಲ ಕೊಟ್ಟರೆ ರಾಜ್ಯ ಸರ್ಕಾರದವರಾದ ನೀವು ಶೇಕಡ 50ರಷ್ಟು ಸಬ್ಸಿಡಿ ಎಂದು ಮಾಡಿ, ಉಚಿತವಾಗಿ ಪೂರ್ಣ ಸೌಲಭ್ಯ ಒದಗಿಸಿಕೊಡಿ. ಕೇಂದ್ರ ಸರ್ಕಾರದಿಂದ ಎಸ್. ಸಿ. ಪಿ. ಯಡಿ ಶೇಕಡ 50ರಷ್ಟು ಹಣ ಬರುತ್ತಿದ್ದು, ನೀವು ಇನ್ನು ಶೇಕಡ 50ರಷ್ಟು ಸಬ್ಸಿಡಿ ಮಾಡಿದಲ್ಲಿ ಹೆಚ್ಚು ಫಲಾನುಭವಿಗಳನ್ನು ಯೋಜನೆಯಡಿ ಪಾಲ್ಗೊಳ್ಳುವಂತೆ ಮಾಡಬಹುದಾಗಿದೆ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಖಂಡಿತವಾಗಿಯೂ ನಾನು ಮಾಡುತ್ತೇನೆ. ಇದರ ಜೊತೆಗೆ ಸಾಧನೆಯಾಗಿಲ್ಲದಿರುವ ಕುರಿತು ತಮ್ಮ ಗಮನಕ್ಕೆ ತರುವುದೇನೆಂದರೆ, ಯೋಜನೆಯಡಿ ನೀರು ಬಂದಲ್ಲಿ ಮಾತ್ರ ದುಡ್ಡು ಕೊಡುತ್ತೇವೆ, ನೀರು ಬರದಿದ್ದರೆ ದುಡ್ಡು ಕೊಡುವುದಿಲ್ಲ. ಕಳೆದ ಮೂರು ವರ್ಷಗಳ ಹಿಂದೆಯೇ ಈ ಕುರಿತಾದ ಟೆಂಡರ್ ಕರೆದು ಏಜೆನ್ಸಿಗಳನ್ನು ನಿಗದಿಪಡಿಸಿ ಕೆಲಸಗಳನ್ನೆಲ್ಲಾ

ವಹಿಸಿಕೊಡಲಾಗಿದೆ. ಈ ಪೈಕಿ ಕೆಲವು ಏಜೆನ್ಸಿಗಳವರು ತಮಗೆ ನಿಗದಿಪಡಿಸಿರುವ ದರದಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿ ಸತಾಯಿಸುತ್ತಿದ್ದಾರೆ. ಒಂದು ಸಲ ಏಜೆನ್ಸಿಗೆ ಕೆಲಸವನ್ನು ವಹಿಸಿದ ನಂತರ ಮಧ್ಯದಲ್ಲಿ ದರವನ್ನು ಏರಿಸುವುದಕ್ಕಾಗುವುದಿಲ್ಲ. ಈ ಬಗ್ಗೆ ಅವರಿಗೆ ಅಂತಿಮ ಎಚ್ಚರಿಕೆ ನೀಡಿದ್ದು, ಈ ತಿಂಗಳ ಅಂತ್ಯದೊಳಗೆ ಗುರಿಯನ್ನು ಮುಟ್ಟುತ್ತೇವೆ.

ಶ್ರೀ ಜಿ. ಎನ್. ಬಚ್ಚೇಗೌಡ : ಕೋಲಾರ, ತುಮಕೂರು ಭಾಗಗಳಲ್ಲಿ 350 ಅಡಿಗಳವರೆಗೆ ಕೊಳವೆಬಾಕಿ ಕೊರೆದರೆ ನೀರು ನಿಗುವುದಿಲ್ಲ. ಅಂತರ್ಜಲ ತುಂಬಾ ಕೆಳಮಟ್ಟಕ್ಕಿಳಿದಿರುವುದರಿಂದ ನೀರು ಲಭ್ಯವಾಗುವವರೆಗೂ ಕೊರೆಸುವ ವ್ಯವಸ್ಥೆಯಾಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಈಗ ವೈಯಬಲ್ ಯುನಿಟ್ ಎಂದು ಮಾಡುತ್ತೇವೆ. ಸಾಮೂಹಿಕ ನೀರಾವರಿ ಯೋಜನೆಯಡಿ ಎರಡರಿಂದ ಮೂರು ಪಾಯಿಂಟ್‌ಗಳಲ್ಲಿ ಬೋರ್ ಕೊರೆಸಬಹುದು. ಕೊರೆಸಿದ ಎರಡೂ ಪಾಯಿಂಟ್‌ಗಳಲ್ಲೂ ಸಾಕಷ್ಟು ನೀರು ಬರದಿದ್ದರೆ ಮತ್ತೊಂದು ಪಾಯಿಂಟ್‌ನಲ್ಲಿ ಕೊರೆಸಬಹುದು. ಇಲ್ಲವೇ ಒಂದು ಪಾಯಿಂಟ್‌ನಲ್ಲಿ ಕೊರೆಸಿದ್ದು ವಿಫಲವಾದರೆ ಮತ್ತೊಂದು ಪಾಯಿಂಟ್‌ನಲ್ಲಿ ಕೊರೆಸಬಹುದು. ಕೊರೆಸಿದ ನಂತರವೂ ಅಕಸ್ಮಾತ್ ನೀರು ಬಾರದಿದ್ದರೆ ಸುಮಾರು 65 ಸಾವಿರ ರೂಪಾಯಿಗಳನ್ನು ಯುನಿಟ್ ಕಾಸ್ಟ್ ಎಂದು ಏನು ನಿಗದಿಪಡಿಸಿದ್ದೇವೆ, ಇದು ವರ್ಕ್‌ಔಟ್ ಆಗದಿದ್ದರೆ ಯುನಿಟ್‌ಗೆ ಇನ್ನೂ ಹತ್ತು ಸಾವಿರ ರೂಪಾಯಿಗಳು ಜಾಸ್ತಿಯಾಗುವುದಾದರೆ ಇನ್ನೂ ಆಳಕ್ಕೆ ಕೊರೆಸಲು ಕ್ರಮ ಕೈಗೊಳ್ಳುತ್ತೇವೆ. ಇಲ್ಲಿ ಒಂದು ಅಂಶವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ಇದರಲ್ಲಿ ಸಾಮಾಜಿಕ ಸ್ಥಿತಿ-ಗತಿಗಳನ್ನು ಅಳತೆ ಮಾಡತಕ್ಕಂಥ ಸನ್ನಿವೇಶವಿದೆ. ಇದರಲ್ಲಿ ನಾವು ನಿಮ್ಮನ್ನು (ಶಾಸಕರನ್ನು) ಅಧ್ಯಕ್ಷರನ್ನಾಗಿ ಮಾಡಿರುವಂಥ ಸಂದರ್ಭದಲ್ಲಿ ಕೆಲವು ಸೂಚನೆಗಳನ್ನು ಕೊಟ್ಟಿದ್ದು ಸಾಧ್ಯವಿದ್ದರೆ ಯುನಿಟ್‌ಗೆ ಹೋಗಿ ಪರಿಶೀಲಿಸಿ ಬರಬೇಕು, ಇಲ್ಲದಿದ್ದರೆ ನಿಮ್ಮ ಪರವಾಗಿ ಯಾರನ್ನಾದರೂ ಯನಿಟ್ ಹತ್ತಿರ ಕಳುಹಿಸಿ ಇನ್ಸ್‌ಪೆಕ್ಷನ್ ಮಾಡಿ ಕೆಲಸ ಹೇಗೆ? ನಡೆಯುತ್ತಿದೆ? ಯಂತ್ರಗಳು ಹೇಗೆ ಕಾರ್ಯನಿರ್ವಹಿಸುತ್ತಿವೆ? ಎಂಬುದನ್ನೆಲ್ಲಾ ಪರಿಶೀಲಿಸಿ ವರದಿ ಮಾಡಬೇಕೆಂದು ತಿಳಿಸಿದ್ದರೂ ಒಬ್ಬಿಬ್ಬರನ್ನು ಹೊರತುಪಡಿಸಿದರೆ ಮತ್ತ್ಯಾರೂ ಕೂಡ ನನಗೆ ವರದಿ ಮಾಡಿರುವುದಿಲ್ಲ. ಇದರ ಬಗ್ಗೆ ಮುಂದೆ ನಾನು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಹಿಂದುಳಿದ ಚಾಮರಾಜನಗರ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ವರ್ಗದವರಿದ್ದು ಆ ಜಿಲ್ಲೆಗೆ ಹೆಚ್ಚಿಗೆ ಗುರಿ ಹಾಗೂ ಹಣ ಕೊಡಬೇಕೆಂಬ ಆಸೆ ಇಟ್ಟುಕೊಂಡಿದ್ದು ಆ ದಿಸೆಯಲ್ಲಿ ಕಾರ್ಯಪ್ರವೃತ್ತನಾಗುತ್ತೇನೆ.

ಹುಣಸೂರು ಪಟ್ಟಣಕ್ಕೆ ನೀರು ಸರಬರಾಜು ಯೋಜನೆ

102 (1188) ಶ್ರೀ ವಿ. ಪಾಪಣ್ಣ (ಹುಣಸೂರು) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ಪಟ್ಟಣಕ್ಕೆ ಕುಡಿಯುವ ನೀರಿಗಾಗಿ ಕೆ. ಆರ್. ನಗರದಿಂದ ಕಾವೇರಿ ನೀರನ್ನು ಒದಗಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?